ಸಿ.ಸಿ. ನಂ. 3599-2012
ಪಿಡಬ್ಲ್ಯೂ-21

ಸಾಕ್ಷಿಯನ್ನು ದಿನಾಂಕಃ 10-02-2025 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.
ಮುಂದುವರಿದ ಮುಖ್ಯ ವಿಚಾರಣೆ ಹಿ.ಸ.ಸಾ.ಅ. ರವರಿಂದಃ

ದಿ. 22-01-2025 ರಂದು ಹೇಳಿದ ಮುಖ್ಯ ವಿಚಾರಣೆಯಲ್ಲಿ ನಾನು ಹೇಳಿದಂತೆ ಅಸಲು ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಕಾರಣ ಸದರಿ ದಾಖಲೆಗಳು ಕಳೆದು ಹೋಗಿರುತ್ತವೆ.

ಪಾಟೀ ಸವಾಲು 1 ನೇ ಆರೋಪಿಯ ಪರ ಶ್ರೀ ಎಸ್ ಹೆಚ್ ವಕೀಲರಿಂದಃ

ನಾನು ಬುಕ್ ಮಾಡಿದ್ದ ನಿವೇಶನದ ಬಳಿ ಹೋಗಿದೆ. ಅಲ್ಲಿ ಭೂಮಿ ಇತ್ತು, ಆದರೆ ನಿವೇಶನ ಆಗಿ ಪರಿವರ್ತನೆ ಮಾಡಿರಲಿಲ್ಲ. ನಾನು ಆರೋಪಿತರಿಗೆ ಕಾನೂನು ತಿಳುವಳಿಕೆ ಪತ್ರವನ್ನು ಕೊಟ್ಟಿರುವುದಿಲ್ಲ. ಆ ಬಗ್ಗೆ ಸಿವಿಲ್ ದಾವೆಯನ್ನು ಸಲ್ಲಿಸಿರುತ್ತೇನೆ, ಅದು ವಿಚಾರಣೆಗಾಗಿ ಬಾಕಿ ಇರುತ್ತದೆ. ಆ ಬಗ್ಗೆ ಜಿಲ್ಲಾ ಗ್ರಾಹಕರ ವೇದಿಕೆ ಮುಂದೆ ದೂರನ್ನು ಸಲ್ಲಿಸಿರುವುದಿಲ್ಲ.

2007-08 ರಲ್ಲಿ ಬೆಂಗಳೂರಿನ ಸುತ್ತ-ಮುತ್ತಲಿನ ಜಮೀನುಗಳನ್ನು ಕೃಷಿಯೇತರ ಜಮೀನುಗಳಾಗಿ ಮಾಡಲು ಕರ್ನಾಟಕ ಸರ್ಕಾರವು ನಿರ್ಭಂದ ವಿಧಿಸಿತ್ತು ಎಂದೆ ಗೊತ್ತಿಲ್ಲ. ಆ ಕಾರಣದಿಂದ ನಿವೇಶನ ಮಾಡಲು ತಡವಾಗಿತ್ತು ಎಂದರೆ ಗೊತ್ತಿಲ್ಲ. ನಾವು ದೂರನ್ನು ಕೊಟ್ಟ ಮೇಲೆ ಸಿಸಿಬಿಯವರು ಆರೋಪಿಯ ಕಚೇರಿಗೆ ಹೋಗಿ ಎಲ್ಲಾ ದಾಖಲೆಗಳನ್ನು ಅಮಾನತ್ತು ಪಡಿಸಿಕೊಂಡಿದ್ದರು ಎಂದರೆ ಗೊತ್ತಿಲ್ಲ. ಆ ಕಾರಣದಿಂದ ನಿವೇಶನ ಮಾಡುವ ಪ್ರಕ್ರಿಯೆ ತಡವಾಗಿರುತ್ತದೆ ಎಂದರೆ ಗೊತ್ತಿಲ್ಲ. ಆರೋಪಿಗೆ ಮೋಸ ಮಾಡುವ ಉದ್ದೇಶ ಇರಲಿಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲು 2 ನೇ ಆರೋಪಿಯ ಪರ ಶ್ರೀ ಎ ಎನ್ ಜೆ ವಕೀಲರು 1 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಕೋರಿರುತ್ತಾರೆ.

ಮರುವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಯಿತು.)

ಓ ಹೇ ಕೇ ಸ ಇ ಒ

1 ನೇ ಅ. ಮು. ನ್ಯಾ.ದಂ. ನ್ಯಾ